ದಿನಾಂಕ: 07-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಲ್.ಎಸ್.ಬಿ. ವಾದಿ ಪರ ವಕೀಲರಿಂದಃ**

25. ದುಡ್ಡು ಕೊಡದೆ ನಮ್ಮ ತಂದೆಗೆ ಮೋಸ ಮಾಡಿ ಖರೀದಿ ಕರಾರ ಪತ್ರ ಬರೆಯಿಸಿಕೊಂಡಿದ್ದಾರೆ ಎಂದು ಹೇಳಿ ವಾದಿಯ ಮೇಲೆ ಪೊಲೀಸ ಠಾಣೆಯಲ್ಲಿ ಅಥವಾ ನ್ಯಾಯಾಲಯದಲ್ಲಿ ದೂರು ಅಥವಾ ದಾವೆ ದಾಖಲಿಸಿಲ್ಲ. ನನಗೆ ದೂರು ಅಥವಾ ದಾವೆ ಹೂಡಲು ಯಾವುದೇ ತೊಂದರೆ ಇರಲಿಲ್ಲ. ನಮ್ಮ ವಕೀಲರಿಗೆ ನಮ್ಮ ಹೊಲದ ಮೇಲೆ ಬ್ಯಾಂಕ ಮತ್ತು ಸೊಸೈಟಿಯಲ್ಲಿ ಸಾಲ ಇರುವುದಿಲ್ಲ ಎಂದು ಹೇಳಿ ಮಾಹಿತಿ ಕೊಟ್ಟಿರುತ್ತೇನೆ.

26. ಖರೀದಿ ಕರಾರ ಪತ್ರ ಆದ ದಿನಾಂಕದಂದು ದಾವಾ ಆಸ್ತಿಯ ಬೆಲೆ ರೂ.20,00,000/- ಎಂದು ತೋರಿಸಲು ನನ್ನ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆ ಇರುವುದಿಲ್ಲ. ದಾವಾ ಆಸ್ತಿಯನ್ನು ಹೊರತುಪಡಿಸಿ ನಮಗೆ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆಯಲ್ಲಿ ಮದುವೆ, ನಮ್ಮ ತಾಯಿಯ ಕ್ಯಾನ್ಸರ ಚಿಕಿತ್ಸೆ ಇವುಗಳಿಗೆ ದುಡ್ಡು ಇಲ್ಲದೇ ಇದ್ದುದ್ದರಿಂದ ನಮ್ಮ ಕುಟುಂಬದ ಆಸ್ತಿಯನ್ನು ಮಾರಾಟಕ್ಕೆ ತೆಗೆದಿದ್ದೆವು ಎಂದರೆ ಸರಿಯಲ್ಲ.

27. ನನಗು ಮತ್ತು ನನ್ನ ಕುಟುಂಬಕ್ಕು ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬದ ಆರ್ಥಿಕ ಸಂಕಷ್ಟವನ್ನು

ನೀಗಿಸುವುದಕ್ಕಾಗಿ ದಾವಾ ಆಸ್ತಿಯನ್ನು ರೂ.6,00,000/- ಮಾರಾಟ ಮಾಡಲು ಒಪ್ಪಿ ವಾದಿಯಿಂದ ರೂ.5,16,000/- ದುಡ್ಡು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಖರೀದಿ ಕರಾರ ಪತ್ರಕ್ಕೆ ನಾವು ಮಾಹಿತಿ ಕೊಟ್ಟು ಅದಕ್ಕೆ ನಾನು, ನನ್ನ ಹೆಂಡತಿ ಮತ್ತು ನನ್ನ ತಂದೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಯು ಬಾಕಿ ಉಳಿದ ರೂ.84,000/- ಕೊಡಲು ತಯಾರ ಇದ್ದು ಅದನ್ನು ಪಡೆದು 11-ಇ ನಕಾಶೆ ತಯಾರ ಮಾಡಿ ಖರೀದಿ ಪತ್ರ ಬರೆದುಕೊಡುವ ಜವಾಬ್ದಾರಿ ನಮ್ಮ ಮೇಲೆ ಇದೆ ಎಂದರೆ ಸರಿಯಲ್ಲ. ಹೇಗಾದರು ಮಾಡಿ ವಾದಿಗೆ ದಾವಾ ಆಸ್ತಿಗೆ ಸಂಬಂಧಪಟ್ಟ ಹಾಗೆ ಖರೀದಿ ಪತ್ರ ಬರೆದುಕೊಡಬಾರದೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ